ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮಹಮ್ಮದ್ ನವಾಜ್

ಭೋಜಪ್ಪ ಕೆ. -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು

ರಿಟ್ ಅರ್ಜಿಸಂಖ್ಯೆ: 8340/2018 (ಜಿ.ಎಮ್.-ಆರ್ಇಎಸ್), ದಿನಾಂಕ 18 ನೇ ಅಕ್ಟೋಬರ್, 2019.

ಆಜ್ಞೆ

ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ:

ಸ್ಥೂಲ ಅವಲೋಕನ:

ಭಾರತ ಸಂವಿಧಾನದ 226 ನೇ ಅನುಚ್ಛೇದದ ಮೇರೆಗೆ ಈ ರಿಟ್ ಅರ್ಜಿಯಲ್ಲಿ, ಕರ್ನಾಟಕ ಗೃಹನಿರ್ಮಾಣ ಮಂಡಳಿ (ಹಂಚಿಕೆ) (ತಿದ್ದುಪಡಿ) ವಿನಿಯಮಗಳು, 2017 ರ (ಸಂಕ್ಷಿಪ್ತವಾಗಿ " ತಿದ್ದುಪಡಿ ವಿನಿಯಮಗಳು ") ಮೂಲಕ ತಿದ್ದುಪಡಿಯಾದಂತೆ, ಕರ್ನಾಟಕ ಗೃಹನಿರ್ಮಾಣ ಮಂಡಳಿ (ಹಂಚಿಕೆ) ವಿನಿಯಮಗಳು, 1983 ರ (ಸಂಕ್ಷಿಪ್ತವಾಗಿ " ಸದರಿ ವಿನಿಯಮಗಳು ") ಕೆಲವು ಭಾಗಗಳಿಂದ, ಭಾರತ ಸಂವಿಧಾನದ 14 ನೇ ಅನುಚ್ಛೇದದ ಉಲ್ಲಂಘನೆಯಾಗಿದ್ದು, ಅವುಗಳನ್ನು ಅಸಂವಿಧಾನಕವೆಂದು ಘೋಷಿಸಲು ಕೋರಲಾಗಿದೆ.ಸದರಿ ವಿನಿಯಮಗಳ 4 ನೇ ವಿನಿಯಮವನ್ನು ಮತ್ತು 9 ಎ ವಿನಿಯಮವನ್ನು ತಿದ್ದುಪಡಿ ವಿನಿಯಮಗಳ ಮೂಲಕ ಪ್ರತಿಯೋಜಿಸಲಾಗಿದೆ.4 ನೇ ವಿನಿಯಮದ ಭಾಗವಾಗಿ ರೂಪುಗೊಂಡಿರುವ ಪ್ರವರ್ಗ- ಎ ಮತ್ತು ಪ್ರವರ್ಗ-ಸಿ ಮತ್ತು 9 ಎ ವಿನಿಯಮದ ಭಾಗವಾಗಿರುವ ಕೋಷ್ಟಕದ ಪ್ರವರ್ಗ-ಸಿ ಇವುಗಳನ್ನು ಪ್ರಶ್ನಿಸಲಾಗಿದೆ.ಪ್ರತಿಯೋಜಿತ 4 ನೇ ವಿನಿಯಮದ ಮತ್ತು 9 ಎ ವಿನಿಯಮದ ಸುಸಂಗತ ಭಾಗಗಳನ್ನು ಅನುಕೂಲದ ದೃಷ್ಟಿಯಿಂದ ಮರು-ನಿರೂಪಿಸಲಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

"4. ಮನೆಗಳ/ನಿವೇಶನಗಳ ಮೀಸಲಾತಿ:

(1) ಈ ವಿನಿಯಮಗಳಿಗೆ ಒಳಪಟ್ಟು, ಮಂಡಳಿಯು ಸ್ವತಃ ಅಥವಾ ಸರ್ಕಾರದ ನಿರ್ದೇಶನಗಳ ಮೇರೆಗೆ 9 ನೇ ವಿನಿಯಮದ ಪ್ರಕಾರ, ವ್ಯಕ್ತಿಗಳ ಯಾವುದೇ ನಿರ್ದಿಷ್ಟ ವರ್ಗಕ್ಕೆ ಹಂಚಿಕೆ ಮಾಡಲು ಯಾವುದೇ ಪ್ರದೇಶದಲ್ಲಿ ಮನೆಗಳನ್ನು/ನಿವೇಶನಗಳನ್ನು ಮೀಸಲಿಡಬಹುದು ಹಾಗೂ ಮನೆಗಳನ್ನು/ನಿವೇಶನಗಳನ್ನು ರೂಪಿಸಿದ ಮತ್ತು ಮನೆಗಳನ್ನು ನಿರ್ಮಿಸಿದ ನಗರ, ಪಟ್ಟಣ ಅಥವಾ ಇತರ ಸ್ಥಳಗಳಲ್ಲಿರುವ ಯಾವುದೇ ಕಚೇರಿಯಲ್ಲಿನ ಅಥವಾ ಸಂಸ್ಥೆಯಲ್ಲಿನ ನೌಕರರನ್ನು ಅಂಥ ವರ್ಗದ ವ್ಯಕ್ತಿಗಳು ಒಳಗೊಳ್ಳಬಹುದು.ಕೆಳಗೆ ನಿರ್ದಿಷ್ಟ ಪಡಿಸಿದ ಮಾರ್ಗಸೂಚಿಗಳಿಗೆ ಮತ್ತು ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮಂಡಳಿಯು ವಿಲೇ ಮಾಡಬಹುದಾಗಿರುವ ಗರಿಷ್ಠ ಪರಿಮಿತಿಗೆ ಒಳಪಟ್ಟು, ಮನೆಗಳ/ನಿವೇಶನಗಳ ಪ್ರತಿಯೊಂದು ಪ್ರವರ್ಗದಲ್ಲಿ, ಗರಿಷ್ಠ ಶೇಕಡ ಹತ್ತರಷ್ಟಕ್ಕೆ ಮನೆಗಳ ನಿವೇಶನಗಳ ವಿವೇಚನಾನುಸಾರ ಕೋಟಾವನ್ನು ಅಧಿಸೂಚಿಸಿರುವಲ್ಲಿ, ಪ್ರತಿಯೊಂದು ಪ್ರದೇಶದಲ್ಲಿ ಮೀಸಲಾತಿ ಇರತಕ್ಕದ್ದು.

(2) ಉಪ- ವಿನಿಯಮ (1) ರ ಅಡಿಯಲ್ಲಿ ಮನೆಗಳ ನಿವೇಶನಗಳ ಅ ಂ ಥ ವಿವೇಚನಾನುಸಾರ ಕೋಟಾದ ಶೇಕಡಾ ಹತ್ತರಷ್ಟನ್ನು ಮೀಸಲಿರಿಸಿದಲ್ಲಿ , ವಿವಿಧ ಪ್ರವರ್ಗಗಳಲ್ಲಿ ಹಂಚಿಕೆಗೆ ಅನುಸರಿಸಬೇಕಾದ ಪ್ರಕ್ರಿಯೆಯು ಈ ಮುಂದಿನಂತಿರತಕ್ಕದ್ದು:-

| ಪ್ರವರ್ಗ | ವಿವರಣೆ | ಶೇಕಡಾವಾರು |
|---|---|---|
| ಎ | ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳಿಗೆ ಮಂಡಳಿಯ ಕೋಟಾದ ವಿಲೆ | ಇಪ್ಪತ್ತೈದು |
| ಬಿ(i) | ಭಾರತ ಒಲಂಪಿಕ್ ಸಂಸ್ಥೆಯು (ಐಒಎ) ಮನ್ನಣೆ ನೀಡಿದಂತೆ ಅಂತರಾಷ್ಟ್ರೀಯ / ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಕ್ರೀಡಾ ಕ್ಷೇತ್ರದಲ್ಲಿ ಮನ್ನಣೆ ಪಡೆದಿರುವ ವ್ಯಕ್ತಿಗಳು | ಇಪ್ಪತ್ತು |
| ಬಿ(ii) | ರಾಷ್ಟ್ರೀಯ / ಅಂತರಾಷ್ಟ್ರೀಯ ಮಟ್ಟದಲ್ಲಿ ಕಲೆ , ಚಿತ್ರಕಲೆ , ಶಿಲ್ಪಕಲೆ , ಸಂಗೀತ , ನೃತ್ಯ , ನಾಟಕ , ಚಲನಚಿತ್ರ , ವಿಜ್ಞಾನ , ಸಾಹಿತ್ಯ , ಶಿಕ್ಷಣ , ಔಷಧಿ , ಮುದ್ರಣ ಮತ್ತು ಸಾರ್ವಜನಿಕ ಆಡಳಿತದಲ್ಲಿ ವಿಶೇಷ ಮನ್ನಣೆ ಪಡೆದಿರುವ ವ್ಯಕ್ತಿಗಳು ಹಾಗೂ ಪೀಠಾಸೀನ ಅಥವಾ ಹಿಂದಿನ ಉನ್ನತ ನ್ಯಾಯಾಲಯಗಳ ನ್ಯಾಯಾಧೀಶರು | ಇಪ್ಪತ್ತು |
| ಬಿ(iii) (ಎ) | ಹತ್ತು ವರ್ಷಗಳಿಗಿಂತ ಕಡಿಮೆ ಇರದ ಅವಧಿಗೆ ರಾಜ್ಯದಲ್ಲಿ ವಾಸಿಸುತ್ತಿರುವ ಸ್ವಾತಂತ್ರ್ಯ ಯೋಧರು | ಹತ್ತು |
| (ಬಿ) | ಕರ್ತವ್ಯದ ಮೇಲಿದ್ದಾಗ ಮೃತರಾದ ಕರ್ನಾಟಕ ಸರ್ಕಾರಿ ನೌಕರರ ಅವಲಂಬಿತರು | |
| (ಸಿ) | ಮಾಜಿ - ಸೈನಿಕರು ಅಥವಾ ಸೈನಿಕರು ಅಥವಾ ಮರಣ ಹೊಂದಿದ ಸೈನಿಕರ ಕುಟುಂಬ ಸದಸ್ಯರು | |
| ಸಿ | ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳಿಗೆ ಸರ್ಕಾರಿ ಕೋಟಾದ ವಿಲೆ | ಇಪ್ಪತ್ತೈದು |

" ಈ ಉದ್ದೇಶಕ್ಕಾಗಿ ನೀಡಲಾದ ವಿವರಣೆ:-

ಪ್ರವರ್ಗ “ಎ” ಮತ್ತು “ಸಿ” ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು " ಎಂದರೆ , " ರಾಷ್ಟ್ರದ / ರಾಜ್ಯದ ಹಿತಾಸಕ್ತಿಯಲ್ಲಿ ಕ್ಷೇಮಾಭಿವೃದ್ಧಿಯಲ್ಲಿ , ಸಾಮಾಜಿಕ ಕಾರಕರ್ತರಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದ ವ್ಯಕ್ತಿಗಳು ವ್ಯಕ್ತಿ " ಹಾಗೂ " ಸರ್ಕಾರದ ವಿವೇಚನೆಗೆ ಬಿಟ್ಟಿರುವ ಬಡವರ ಮತ್ತು ತೊಂದರೆಯಲ್ಲಿರುವ ಜನರ ಉನ್ನತಿಗಾಗಿ ಸಾಮಾಜಿಕ ಸೇವೆಯ ವಿವಿಧ ಕ್ಷೇತ್ರಗಳಲ್ಲಿ ತೊಡಗಿರುವ ವ್ಯಕ್ತಿಗಳು/ ವ್ಯಕ್ತಿ

(ಒತ್ತು ನೀಡಲಾಗಿದೆ)

" 9 ಎ. ಪ್ರತ್ಯೇಕ ಮನೆಗಳ/ನಿವೇಶನಗಳ ಹಂಚಿಕೆ:

( 1) ಈ ವಿನಿಯಮಗಳಲ್ಲಿ ಏನೇ ಇದ್ದರೂ, ಪ್ರತ್ಯೇಕ ಮನೆಗಳ/ ನಿವೇಶನಗಳ ಹಂಚಿಕೆಯು ಇದರಲ್ಲಿ ಇನ್ನು ಮುಂದೆ ಉಪಬಂಧಿಸಿದ್ದಕ್ಕೆ ಅನುಸಾರವಾಗಿರತಕ್ಕದ್ದು.

(2) ಮಂಡಳಿಯು ಆರು ತಿಂಗಳುಗಳಿಗೊಮ್ಮೆ, ಬಡಾವಣೆಗಳ ಮತ್ತು ಮನೆಗಳಲ್ಲಿ ನಿವೇಶನಗಳ ಅಳತೆಯ ವಿವರಗಳನ್ನು ನೀಡಿ, ಪ್ರತ್ಯೇಕ ಮನೆಗಳ/ನಿವೇಶನಗಳ ಪಟ್ಟಿಯನ್ನು ಸಿದ್ಧಪಡಿಸುವಂತೆ ಮಾಡಬೇಕು ಮತ್ತು 9 ನೇ ವಿನಿಯಮದ (ಡಿ) ಖಂಡದ ಅಡಿಯಲ್ಲಿ ಹಂಚಿಕೆ ಮಾಡಿದ ನಂತರ ಹಂಚಿಕೆಗೆ ಅರ್ಹರಿರುವ ವ್ಯಕ್ತಿಗಳಿಗೆ ಈ ವಿನಿಯಮದ ಅಡಿಯಲ್ಲಿ ಹಂಚಿಕೆಗಾಗಿ ಯಾವುದೇ ಅಥವಾ ಎಲ್ಲಾ ಮನೆಗಳನ್ನು ನಿವೇಶನಗಳನ್ನು ನೀಡತಕ್ಕದ್ದು.

(3) ಮನೆಗಳನ್ನು ನಿವೇಶನಗಳನ್ನು (2) ನೇ ಉಪ-ವಿನಿಯಮದ ಅಡಿಯಲ್ಲಿ ಮೀಸಲಾಗಿರಿಸಿರುವಲ್ಲಿ, ಬೇರೆ ಬೇರೆ ಪ್ರವರ್ಗಗಳಲ್ಲಿ ಹ ೦ ಚಿಕ್ ಗಾಗಿ ಅನುಸರಿಸಬೇಕಾದ ಪ್ರಕ್ರಿಯೆಯು ಈ ಮುಂದಿನಂತಿರತಕ್ಕದ್ದು:

| **ಪ್ರವರ್ಗ** | **ವಿವರಣೆ** | **ಶೇಕಡಾವಾರು** |
|---|---|---|
| ಎ | ಹರಾಜಿನ ಮೂಲಕ ವಿಲೆ | ನಲವತ್ತು |
| ಬಿ ( i ) | ಭಾರತ ಒಲಂಪಿಕ್ ಸಂಸ್ಥೆಯು ( ಐಒಎ ) ಮನ್ನಣೆ ನೀಡಿದಂತೆ ಅಂತರಾಷ್ಟ್ರೀಯ / ರಾಷ್ಟ್ರೀಯ ಮಟ್ಟದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಕ್ರೀಡಾ ಕ್ಷೇತ್ರದಲ್ಲಿ ಮನ್ನಣೆ ಪಡೆದಿರುವ ವ್ಯಕ್ತಿಗಳು | ಇಪ್ಪತ್ತು |
| ಬಿ ( ii ) | ರಾಷ್ಟ್ರೀಯ / ಅಂತರಾಷ್ಟ್ರೀಯ ಮಟ್ಟದಲ್ಲಿ - ಕಲೆ , ಚಿತ್ರಕಲೆ , ಶಿಲ್ಪಕಲೆ , ಸಂಗೀತ , ನೃತ್ಯ , ನಾಟಕ , ಚಲನಚಿತ್ರ , ವಿಜ್ಞಾನ , ಸಾಹಿತ್ಯ , ಶಿಕ್ಷಣ , ಔಷಧಿ , ಮುದ್ರಣ ಮತ್ತು ಸಾರ್ವಜನಿಕ ಆಡಳಿತದಲ್ಲಿ ವಿಶೇಷ ಮನ್ನಣೆ ಪಡೆದಿರುವ ವ್ಯಕ್ತಿಗಳು \| ಹಾಗೂ ಪೀಠಾಸೀನ ಅಥವಾ ಅಥವಾ ಹಿಂದಿನ ಹಿಂದಿನ ಉನ್ನತ ನ್ಯಾಯಾಲಯಗಳ ನ್ಯಾಯಾಧೀಶರು | ಇಪ್ಪತ್ತು |
| ಬಿ ( iii ) ( ಎ ) | ಹತ್ತು ವರ್ಷಗಳಿಗಿಂತ ಕಡಿಮೆ ಇರದ ಅವಧಿಗೆ ರಾಜ್ಯದಲ್ಲಿ ವಾಸಿಸುತ್ತಿರುವ ಸ್ವಾತಂತ್ರ್ಯ ಯೋಧರು | |
| ( ಬಿ ) | ಕರ್ತವ್ಯದ ಮೇಲಿದ್ದಾಗ ಮೃತರಾದ ಕರ್ನಾಟಕ ಸರ್ಕಾರಿ ನೌಕರರ ಅವಲಂಬಿತರು | ಹತ್ತು |
| ( ಸಿ ) | ಮಾಜಿ - ಸೈನಿಕರು ಅಥವಾ ಸೈನಿಕರು | |
| ಸಿ | ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳಿಗೆ ಸರ್ಕಾರಿ ಕೋಟಾದ ವಿಲೆ | ಇಪ್ಪತ್ತೈದು |

(ಎ ) ಪ್ರವರ್ಗ “ಸಿ” ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು ರಾಷ್ಟ್ರದ / ರಾಜ್ಯದ ಹಿತಾಸಕ್ತಿಯಲ್ಲಿ ಕ್ಷೇಮಾಭಿವೃದ್ಧಿಯಲ್ಲಿ ಸಾಮಾಜಿಕ ಕಾರಕರ್ತರಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದ ವ್ಯಕ್ತಿಗಳು / ವ್ಯಕ್ತಿ " ಹಾಗೂ " ಸರ್ಕಾರದ ವಿವೇಚನೆಗೆ ಬಿಟ್ಟಿರುವ ಬಡವರ ಮತ್ತು ತೊಂದರೆಯಲ್ಲಿರುವ ಜನರ ಉನ್ನತಿಗಾಗಿ ಸಾಮಾಜಿಕ ಸೇವೆಯ ವಿವಿಧ ಕ್ಷೇತ್ರಗಳಲ್ಲಿ ತೊಡಗಿರುವ ವ್ಯಕ್ತಿಗಳು / ವ್ಯಕ್ತಿ .

(ಒತ್ತು ನೀಡಲಾಗಿದೆ)

2. ಯಾವ ಅರ್ಜಿದಾರರು " ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು ಆ ಆ ಪ್ರವರ್ಗಕ್ಕೆ ಸೇರಿದವರೆಂದು ನಿರ್ಧರಿಸುವ ಅನಿರ್ದೇಶಿತ ಮತ್ತು ನಿರಂಕುಶ ವಿವೇಚನಾಧಿಕಾರವನ್ನು ರಾಜ್ಯ ಸರ್ಕಾರವು ಹೊಂದಿದೆ ಮತ್ತು ಅದರಿಂದಾಗಿ, ಸದರಿ ಉಪಬಂಧಗಳು ನಿರಂಕುಶವಾಗಿದ್ದು, ಭಾರತ ಸಂವಿಧಾನದ 14 ನೇ ಅನುಚ್ಛೇದವನ್ನು ಉಲ್ಲಂಘಿಸುತ್ತವೆ ಎಂಬುದು ಅರ್ಜಿದಾರರ ಮೂಲ ವಾದವಾಗಿದೆ.

3. " ಸಾರ್ವಜನಿಕ ಜೀವನ ದಲ್ಲಿರುವ ವ್ಯಕ್ತಿಗಳು " ಪ್ರವರ್ಗವನ್ನು ನಿರ್ಲಕ್ಷ್ಯದಿಂದ ಪರಿಭಾಷಿಸಲಾಗಿದ್ದು, ಅದು ಸರ್ಕಾರಕ್ಕೆ ಅನಿರ್ದೇಶಿತ ಮತ್ತು ನಿರಂಕುಶ ವಿವೇಚನಾಧಿಕಾರವನ್ನು ಪ್ರದತ್ತಗೊಳಿಸುತ್ತದೆ ಎಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.ಭಾರತ ಸಂವಿಧಾನದ 14 ನೇ ಅನುಚ್ಛೇದದ ಬಂಧವನ್ನು ಅನ್ವಯಿಸಲಾಗಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಉದಾಹರಣೆಯ ಮೂಲಕ ಅವರು ಎರಡೂ ವಿನಿಯಮಗಳಲ್ಲಿ ಅಳವಡಿಸಿದ ಪ್ರವರ್ಗ ಬಿ(ii) ರ ಕಡೆಗೆ ನಮ್ಮ ಗಮನ ಸೆಳೆದಿದ್ದಾರೆ.ಈ ಪ್ರವರ್ಗಕ್ಕೆ ಸ ೦ ಬ ೦ ಧಪಡುವಷ್ಟರಮಟ್ಟಿಗೆ, ಸಾಕಷ್ಟು ಮಾರ್ಗಸೂಚಿಗಳಿವೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.ಅವರು ಕೋಷ್ಟಕದಲ್ಲಿ ಉಲ್ಲೇಖಿಸಿದ ಇತರ ಪವರ್ಗಗಳ ಕಡೆಗೆ ಸಹ ನಮ್ಮ ಗಮನವನ್ನು ಸೆಳೆದು, ಎ ಮತ್ತು ಸಿ ಪವರ್ಗಗಳನ್ನು ಹೊರತುಪಡಿಸಿ, ಮೃತ ಸರ್ಕಾರಿ ನೌಕರನ ಅವಲಂಬಿತರನ್ನು ಕುರಿತು ಸಹ ಪರಿಭಾಷಿಸಲಾಗಿದೆ ಎಂದು ಸದರಿ ವಿನಿಯಮಗಳಲ್ಲಿನ ಇತರ ಪ್ರವರ್ಗಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಮಾರ್ಗಸೂಚಿಗಳಿವೆ ಎಂದು ನಿವೇದಿಸಿಕೊಂಡಿರುವರು.ಎ ಮತ್ತು ಸಿ ಪ್ರವರ್ಗಗಳಲ್ಲಿನ ಮನೆಗಳ/ನಿವೇಶನಗಳ ಹಂಚಿಕೆ ಪ್ರಕ್ರಿಯೆಗಳು ನಿಷ್ಪಕ್ಷಪಾತ ವಾಗಿ ಮತ್ತು ಪಾರದರ್ಶಕವಾಗಿ ಇರಬೇಕೆ ೦ ದು ಹೇಳಲಾಗುವುದಿಲ್ಲವಾದ್ದರಿಂದ, 4 ನೇ ವಿನಿಯಮ ಮತ್ತು 9 ಎ ವಿನಿಯಮಗಳೆರಡರಲ್ಲಿ ಅಳವಡಿಸಿದ ವಿವರಣೆ (ಎ) ಮೂಲಕ ಅಂಥ ಒಂದು ಅನಿರ್ದೇಶಿತ ವಿವೇಚನಾಧಿ ಕಾರವನ್ನು ಪ್ರದತ್ತಗೊಳಿಸಿರುವುದು ಉಪಬಂಧಗಳನ್ನು ಅಸಂವಿಧಾನಿಕವನ್ನಾಗಿಸುತ್ತದೆಂದು ಅವರು ನಿವೇದಿಸಿಕೊಂಡಿದ್ದಾರೆ.ಆದುದರಿಂದ, ಸಂಬಂಧಪಟ್ಟ ಉಪಬಂಧಗಳನ್ನು ಅಸಂವಿಧಾನಿಕವೆಂದು ಘೋಷಿಸಬೇಕೆಂದು ಅವರು ನಿವೇದಿಸಿಕೊಂಡಿದ್ದಾರೆ.

4. ಎರಡೂ ವಿನಿಯಮಗಳಲ್ಲಿನ ವಿವರಣೆಯು ಸಮರ್ಪಕವಾದುದಾಗಿದೆ ಮತ್ತು ಸಾಕಷ್ಟು ಮಾರ್ಗಸೂಚಿಗಳನ್ನು ಒಳಗೊಂಡಿರುವ ಸುರಕ್ಷತೆಗಳಿವೆ ಎಂದು ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.ಸಾಮಾಜಿಕ ಕಾರಕರ್ತರಾಗಿ ಸಾರ್ವಜನಿಕ ಜೀವನದಲ್ಲಿ ಸೇವೆ ಸಲ್ಲಿಸಿರುವಂಥ ವ್ಯಕ್ತಿಗಳು ಮಾತ್ರವೇ ಹಂಚಿಕೆಗೆ ಅರ್ಹರಿರುವರೆಂದು ಅವರು ನಿವೇದಿಸಿಕೊಂಡಿರುವರು.ಅಭ್ಯರ್ಥಿಗಳ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ, ಆ ತರುವಾಯ ಹಂಚಿಕೆ ಮಾಡಲು ಸರ್ಕಾರವು ಬದ್ಧವಾಗಿದೆ ಎಂದು ಅವರು ನಿವೇದಿಸಿಕೊಂಡಿರುವರು.ಇದರಲ್ಲಿ ನಿರಂಕುಶವಾದುದೇನೂ ಇಲ್ಲವೆಂದು ಅವರು ನಿವೇದಿಸಿಕೊಂಡಿರುವರು.ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳು ಮಾಡಿಕೊಂಡ ನಿವೇದನೆಗಳನ್ನು 2

ನೇ ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು ಸಹ ಸಮರ್ಥಿಸಿದ್ದಾರೆ.ಸಮಾಜಕ್ಕೆ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳು ಮೀಸಲಾತಿಯ ಪ್ರಯೋಜನ ಪಡೆಯಬೇಕು ಮತ್ತು ಈ ಉಪ ಬ ಂ ಧಗಳನ್ನು ದುರುಪಯೋಗಪಡಿಸಿಕೊಂಡಿರುವುದಿಲ್ಲ ಎಂಬುದನ್ನು ಖಚಿತಪಡಿಸಲು ರಾಜ್ಯವು ಸಮರ್ಪಕ ಕಾವ್ಯವ್ಯವಸ್ಥೆಯನ್ನು ಹೊಂದಿರಬೇಕು ಎಂದು ಅವರು ನಿವೇದಿಸಿಕೊಂಡಿದ್ದಾರೆ.

5. ಈ ನಿವೇದನೆಗಳನ್ನು ನಾವು ಜಾಗರೂಕತೆಯಿಂದ ಪರಿಶೀಲಿಸಿದ್ದೇವೆ.ಸದರಿ ವಿನಿಯಮಗಳನ್ನು ಕರ್ನಾಟಕ ಗೃಹ ಮಂಡಳಿ ಅಧಿನಿಯಮ, 1962 ರ (ಸಂಕ್ಷಿಪ್ತವಾಗಿ ' ಸದರಿ ಅಧಿನಿಯಮ) 76 ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ರಚಿಸಲಾಗಿದೆ.ಸದರಿ ಅಧಿನಿಯಮದ 76 ನೇ ಪ್ರಕರಣವನ್ನು ಈ ಮುಂದಿನಂತೆ ಓದಲಾಗಿದೆ:

"76. ವಿನಿಯಮಗಳು.-ಮಂಡಳಿಯು ಕಾಲ ಕಾಲಕ್ಕೆ ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಂದಿಗೆ, ಅಧಿಸೂಚನೆಯ ಮೂಲಕ ಈ ಅಧಿನಿಯಮ ಮೇರೆಗೆ ಮತ್ತು ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳಿಗನುಸಾರವಾಗಿ:

( ಎ) ಯಾವುದೇ ವಸತಿ ಯೋಜನೆ ಅಡಿಯಲ್ಲಿ ನಿರ್ಮಿಸಲಾದ ಕಟ್ಟಡಗಳ ನಿರ್ವಹಣೆಗಾಗಿ ಮತ್ತು ಬಳಕೆಗಾಗಿ;

(ಬಿ) ವಾಸದ ಮನೆಗಳು ಮತ್ತು ಆವರಣಗಳ ಹಂಚಿಕೆಯಲ್ಲಿ ಅನುಸರಿಸಬೇಕಾದ ತತ್ವಗಳಿಗಾಗಿ;

(ಸಿ) ಅದರ ಕಾರ್ಯವಿಧಾನಗಳನ್ನು ಮತ್ತು ಅದರ ವ್ಯವಹಾರಗಳ ವಿಲೆಗಳನ್ನು ವಿನಿಯಮಿಸುವುದಕ್ಕಾಗಿ

ವಿನಿಯಮಗಳನ್ನು ರಚಿಸತಕ್ಕದ್ದು.

(ಒತ್ತು ನೀಡಲಾಗಿದೆ)

6. ಸದರಿ ಅಧಿನಿಯಮದ ಅಡಿಯಲ್ಲಿ ಸ್ಥಾಪಿಸಿದ ಮಂಡಳಿಯು ಮತ್ತು ಯಾವುದೇ ಯೋಜನೆಗನುಸಾರವಾಗಿ ನಿವೇಶನಗಳನ್ನು ರೂಪಿಸಿದಾಗ ಮತ್ತು ಮನೆಗಳನ್ನು ನಿರ್ಮಿಸಿದಾಗ, ಸದರಿ ವಿನಿಯಮಗಳ ಅಡಿಯಲ್ಲಿ ಹಂಚಿಕೆಗೆ ಅರ್ಹರಿರುವ ವ್ಯಕ್ತಿಗಳಿಗೆ ಹಂಚಿಕೆಗೆ ಯಾವುದೇ ನಿವೇಶನಗಳನ್ನು ಅದು ನೀಡಬಹುದು ಎಂದು ಸದರಿ ವಿನಿಯಮಗಳ 3 ನೇ ವಿನಿಯಮವು ಉಪಬಂಧಿಸುತ್ತದೆ.ಮಂಡಳಿಯು ಸ್ವತಃ ಆಗಲಿ ಅಥವಾ ಸರ್ಕಾರದ ನಿರ್ದೇಶನಗಳ ಮೇರೆಗಾಗಲಿ, ಯಾವುದೇ ನಿರ್ದಿಷ್ಟ ವ್ಯಕ್ತಿಗಳ ವರ್ಗಕ್ಕೆ ಹಂಚಿಕೆಗಾಗಿ ನಿವೇಶನಗಳನ್ನು ಮನೆಗಳನ್ನು ಮೀಸಲಿರಿಸಬಹುದು ಎಂದು 4 ನೇ ವಿನಿಯಮವು ಉಪಬಂಧಿಸುತ್ತದೆ.4 ನೇ ಪ್ರತಿಯೋಜಿತ ವಿನಿಯಮದ 1 ನೇ ಖಂಡದ ಮೇರೆಗೆ, ಮನೆಗಳನ್ನು ನಿವೇಶನಗಳನ್ನು ಅಧಿಸೂಚಿಸಿದ ಪ್ರತಿಯೊಂದು ಪ್ರದೇಶದಲ್ಲಿ, ಸದರಿ ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಮಾರ್ಗಸೂಚಿಗಳಿಗೆ ಒಳಪಟ್ಟು, ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮಂಡಳಿಯ ವಿವೇಚನಾನುಸಾರ ಅದು ವಿಲೇ ಮಾಡಬಹುದಾಗಿರುವ ಮನೆಗಳ/ನಿವೇಶನಗಳ ಪ್ರತಿಯೊಂದು ಪ್ರವರ್ಗದಲ್ಲಿ ಶೇಕಡ 10 ರವರೆಗೆ ವಿವೇಚನಾ ಕೋಟಾ ಮೀಸಲಾತಿ ಇರತಕ್ಕದ್ದೆಂದು ಉಪಬಂಧಿಸಲಾಗಿದೆ.ಪ್ರತಿಯೋಜಿತ 9 ಎ ವಿನಿಯಮವು ಬಿಡಿ/ಪ್ರತ್ಯೇಕ ಮನೆಗಳು ಮತ್ತು ನಿವೇಶನಗಳ ವಿಲೇ ಕುರಿತು ವ್ಯವಹರಿಸುತ್ತದೆ.4 ನೇ ವಿನಿಯಮದ 1 ನೇ ಖಂಡದ ಕೆಳಗೆ ನಿರ್ದಿಷ್ಟಪಡಿಸಿದ ಮಾರ್ಗಸೂಚಿಗಳಿಗೆ ಒಳಪಟ್ಟು, ಮಂಡಳಿಗೆ ಲಭ್ಯವಿರಬಹುದಾದ ಮನೆಗಳ/ನಿವೇಶನಗಳ ಪ್ರತಿಯೊಂದು

ಪ್ರವರ್ಗದಲ್ಲಿ ಗರಿಷ್ಠ ಶೇಕಡಾ 10 ರಷ್ಟು ವಿವೇಚನಾ ಕೋಟಾ ಕುರಿತು 4 ನೇ ವಿನಿಯಮವು ವ್ಯವಹರಿಸುತ್ತದೆ.9 ಎ ವಿನಿಯಮವು, ಬಿಡಿ/ಪ್ರತ್ಯೇಕ ಮನೆಗಳ ನಿವೇಶನಗಳ ವಿಲೇಗೆ ಸಂಬಂಧಿಸಿದೆ.

7. 4 ನೇ ವಿನಿಯಮಕ್ಕೆ ಸಂಬಂಧಿಸಿದಂತೆ, ಶೇಕಡಾ 10 ರ ವಿವೇಚನಾನುಸಾರ ಕೋಟಾದಲ್ಲಿ, ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳಿಗೆ ಮಂಡಳಿಯ ಕೋಟಾ ಆಗಿ ವಿಲೇ ಮಾಡಲು ಶೇಕಡಾ 25 ರಷ್ಟು ಮನೆಗಳನ್ನು ನಿವೇಶನಗಳನ್ನು ಹಾಗೂ " ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳಿಗೆ ಸರ್ಕಾರಿ ಕೋಟಾ ಆಗಿ ಶೇಕಡಾ 25 ರಷ್ಟು ಮನೆಗಳನ್ನು ನಿವೇಶನಗಳನ್ನು ಮೀಸಲಿರಿಸಲಾಗಿದೆ.9 ಎ ವಿನಿಯಮದ ಅಡಿಯಲ್ಲಿ, " ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳಿಗೆ ಸರ್ಕಾರಿ ಕೋಟಾ ಆಗಿ ಶೇಕಡಾ 10 ರಷ್ಟು ಮನೆಗಳನ್ನು ನಿವೇಶನಗಳನ್ನು ಮೀಸಲಿರಿಸಲಾಗಿದೆ.

8. ಪ್ರಚಾರ ಮಾಡಿದ ನಂತರ ಸಹ ವಿವೇಚನಾ ಕೋಟಾಕ್ಕೆ ಅರ್ಜಿಗಳನ್ನು ಆಹ್ವಾನಿಸಲು 4 ನೇ ವಿನಿಯಮದ ಪರಂತುಕವು ಉಪಬಂಧ ಕಲ್ಪಿಸುತ್ತದೆ.ಸ್ವೀಕರಿಸಿದ ಅರ್ಜಿಗಳನ್ನು ಮಂಡಳಿಯು ಪರಿಶೀಲಿಸಿ, ಅವುಗಳನ್ನು ಅನುಮೋದನೆಗಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಎಂದು ಅದು ಉಪಬಂಧಿಸುತ್ತದೆ.

9. 4 ನೇ ವಿನಿಯಮದ ಎ ಮತ್ತು ಸಿ ಸಿ ಪ್ರವರ್ಗಗಳ ಮತ್ತು 9 ಎ ವಿನಿಯಮದ ಸಿ ಪ್ರವರ್ಗದ ಅಡಿಯಲ್ಲಿ, ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳಿಗೆ ಇರುವ ಕೋಟಾವನ್ನು, ಸಂದರ್ಭಾನುಸಾರ ಮಂಡಳಿಯ ಕೋಟಾ ಆಗಿ ಮತ್ತು ಸರ್ಕಾರಿ ಕೋಟಾ ಆಗಿ ವಿಲೇ ಮಾಡಲು ಉಪಬಂಧ ಕಲ್ಪಿಸಲಾಗಿದೆ.4 ನೇ ವಿನಿಯಮ ಮತ್ತು 9 ಎ ವಿನಿಯಮಗಳೆರಡರ ವಿವರಣೆಯು, ನಾವು ಮೇಲೆ ಉಲ್ಲೇಖಿಸಿರುವ ವಿವರಣೆಯೇ ಆಗಿದೆ. ಅದು " ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು " ಎಂಬ ಪದಗಳನ್ನು ಪರಿಭಾಷಿಸುತ್ತದೆ.ಸದರಿ ಪರಿಭಾಷೆಗೆ ಅನುಸಾರವಾಗಿ, ಈ ಮುಂದಿನ ವ್ಯಕ್ತಿಗಳು " ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳ ಪ್ರವರ್ಗದಲ್ಲಿ ಬರುತ್ತಾರೆ:

(ಎ) ರಾಷ್ಟ್ರದ/ರಾಜ್ಯದ ಹಿತಾಸಕ್ತಿಯಲ್ಲಿ ಕ್ಷೇಮಾಭಿವೃದ್ಧಿಯಲ್ಲಿ, ಸಾಮಾಜಿಕ ಕಾರಕರ್ತರಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್'ದ.ಸಲ್ಲಿಸುತ್ತಿರುವ ವ್ಯಕ್ತಿಗಳು;

(ಬಿ) ಬಡವರ ಮತ್ತು ತೊಂದರೆಯಲ್ಲಿರುವ ಜನರ ಅಭಿವೃದ್ಧಿಗಾಗಿ ಸಾಮಾಜಿಕ ಸೇವೆಯ ವಿವಿಧ ಕ್ಷೇತ್ರಗಳಲ್ಲಿ ತೊಡಗಿಕೊಂಡಿದ್ದ ತೊಡಗಿಕೊಂಡಿರುವ ವ್ಯಕ್ತಿಗಳು.

ಸದರಿ ವಿವರಣೆಯಲ್ಲಿ ಅತ್ಯಂತ ಮುಖ್ಯ ಸಂಗತಿ ಎಂದರೆ, " ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳ ಪ್ರವರ್ಗಕ್ಕೆ ಯಾವ ವ್ಯಕ್ತಿಗಳು ಸೇರಿರುವರು ಎಂಬುದನ್ನು ಸರ್ಕಾರದ ವಿವೇಚನೆಗೆ ಮಾತ್ರ ಬಿಡಲಾಗಿದೆ ಎಂದು ಉಪಬಂಧಿಸುವ ಕೊನೆಯ ಭಾಗವಾಗಿದೆ.ಆದ್ದರಿಂದ, " ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳ ಪ್ರವರ್ಗದಲ್ಲಿ ಒಬ್ಬ ವ್ಯಕ್ತಿಯು ಬರುವನೇ ಅಥವಾ ಇಲ್ಲವೇ ಎಂಬ ವಿಷಯವನ್ನು ರಾಜ್ಯ ಸರ್ಕಾರದ ವಿವೇಚನಾನುಸಾರ ಅದು ಅದು ಮಾತ್ರವೇ ನಿರ್ಧರಿಸಬಹುದಾಗಿದೆ.ವಿವೇಚನಾಧಿಕಾರವನ್ನು ಹೇಗೆ ಚಲಾಯಿಸಬೇಕು ಎಂಬುದಾಗಿ ವಿಧಿಸಿದ ಯಾವುದೇ ಮಾರ್ಗಸೂಚಿಗಳಿರುವುದಿಲ್ಲ. 'ಸಾಮಾಜಿಕ ಕಾರಕರ್ತ ' ಮತ್ತು " ರಾಷ್ಟ್ರದ/ರಾಜ್ಯದ ಹಿತಾಸಕ್ತಿಯಲ್ಲಿ/ಕ್ಷೇಮಾಭಿವೃದ್ಧಿಯಲ್ಲಿ ” ಎಂಬ ಪದಗಳು ಅತ್ಯಂತ ಅಸ್ಪಷ್ಟವಾಗಿವೆ.ರಾಷ್ಟ್ರದ/ರಾಜ್ಯದ ಹಿತಾಸಕ್ತಿಯಲ್ಲಿ ಕ್ಷೇಮಾಭಿವೃದ್ಧಿಯಲ್ಲಿ ಸಾಮಾಜಿಕ ಕಾರಕರ್ತನಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳೆಂದು ಎಲ್ಲರೂ ಮತ್ತು ಯಾರಾದರೂ ಕ್ಲೇಮು ಮಾಡಬಹುದಾಗಿದೆ.ಬಡವರ ಮತ್ತು ತೊಂದರೆಯಲ್ಲಿರುವ ವ್ಯಕ್ತಿಗಳ ಅಭಿವೃದ್ಧಿಗಾಗಿ ಸಾಮಾಜಿಕ ಸೇವೆಯ ವಿವಿಧ ಕ್ಷೇತ್ರಗಳಲ್ಲಿ ತೊಡಗಿರುವ

ವ್ಯಕ್ತಿಗಳ ಸಂಬಂಧದಲ್ಲಿನ ಸಂದರ್ಭವು ಇದೇ ಆಗಿದೆ. ' ಸಾಮಾಜಿಕ ಸೇವೆ ' ಎಂಬ ಪರಿಕಲ್ಪನೆಯು ಅತ್ಯಂತ ಅಸ್ಪಷ್ಟವಾಗಿದೆ.ಸಾಮಾಜಿಕ ಕಾರಕರ್ತರ ಮತ್ತು ಸಾಮಾಜಿಕ ಸೇವೆಯನ್ನು ಮಾಡುತ್ತಿರುವ ವ್ಯಕ್ತಿಗಳ ಪ್ರವರ್ಗಗಳ ಭಾಗವಾಗಿ ವ್ಯಕ್ತಿಗಳ ಯಾವ ಪ್ರವರ್ಗವು ರೂಪುಗೊಳ್ಳುವುದು ಎಂದು ನಿರ್ಧರಿಸಲು ಸದರಿ ವಿನಿಯಮಗಳ ಅಡಿಯಲ್ಲಿ ವಿಧಿಸಿದ ಯಾವುದೇ ಮಾರ್ಗಸೂಚಿಗಳು ಅಥವಾ ಅರ್ಹತೆಗಳು ಇರುವುದಿಲ್ಲ.ಇದು ಯಾರೇ ಒಬ್ಬರನ್ನು ಅಥವಾ ಪ್ರತಿಯೊಬ್ಬರನ್ನು " ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳ ಪ್ರವರ್ಗದಲ್ಲಿ ಸೇರಿಸಲು ಸರ್ಕಾರಕ್ಕೆ ಅವಕಾಶ ಮಾಡಿಕೊಡುತ್ತದೆ.ವಿಧಾನಮಂಡಲದ ಸದನಗಳ, ಸ್ಥಳೀಯ ಪ್ರಾಧಿಕಾರಗಳ, ಪೌರಸಭೆಗಳ, ಮುಂತಾದವುಗಳ ಎಲ್ಲಾ ಚುನಾಯಿತ ಪ್ರತಿನಿಧಿಗಳನ್ನು ಈ ಪವರ್ಗದಲ್ಲಿ ತರಬಹುದಾಗಿದೆ.

10. ಈ ಹಂತದಲ್ಲಿ, ಅಖಿಲ ಭಾರತೀಯ ಉಪಭೋಕ್ತಾ ಕಾಂಗ್ರೆಸ್ ವಿರುದ್ಧ ಮಧ್ಯಪ್ರದೇಶ ರಾಜ್ಯ2011 5 ಎಸ್ಸಿಸಿ 29' ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಚ ಉಲ್ಲೇಖಿಸುವುದು ಅವಶ್ಯಕವಾಗಿದ್ದು, ಸದರಿ ತೀರ್ಪಿನ 65 ರಿಂದ 67 ನೇ ಕಂಡಿಕೆಗಳನ್ನು ಈ ಕೆಳಗಿನಂತೆ ಓದಲಾಗಿದೆ:

"65. ರಾಜಕೀಯ ಸಂಸ್ಥೆಗಳು ಮತ್ತು ಅಥವಾ ರಾಜ್ಯದ ಅಧಿಕಾರಿಗಳ ಇಚ್ಛಾನುಸಾರ ಮತ್ತು ಅವರ ಭಾವನೆಗನುಸಾರ ರಾಜ್ಯ ಮತ್ತು/ಅಥವಾ ಅದರ ಏಜನ್ಸಿಗಳು / ಸಾಧನಗಳು ಯಾರೇ ವ್ಯಕ್ತಿಗೆ ಕೊಡುಗೆಯಾಗಿ ನೀಡಲಾಗುವುದಿಲ್ಲ. ರಾಜ್ಯ ಮತ್ತು/ಅಥವಾ ಅದರ ಏಜನ್ಸಿಗಳು / ಸಾಧನಗಳ ಕೊಡುಗೆಯಾಗಿ ನೀಡುವ ಅಥವಾ ಪ್ರಯೋಜನವನ್ನು ನೀಡುವ ಪ್ರತಿಯೊಂದು ಕ್ರಮವು ನಿರ್ಧಾರವು ,ರಾಜ್ಯಪತ್ರದಲ್ಲಿ ಮತ್ತು ಇತರ ಗುರುತಿಸಲಾದ ಪ್ರಚಾರ ಮಾಧ್ಯಮಗಳಲ್ಲಿ ಪ್ರಕಟಿಸುವ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವಂಥ ಉತ್ತಮ , ಪಾರದರ್ಶಕ , ಗೋಚರ ಮತ್ತು ಉತ್ತಮವಾಗಿ ಪರಿಭಾಷಿಸಿದ ಕಾರನೀತಿಯನ್ನಾಧರಿಸಿರಬೇಕು ಹಾಗೂ ಆ ಕಾರನೀತಿಯಿಂದ ಪ್ರಯೋಜನ ಪಡೆಯಬೇಕೆಂದು ಉದ್ದೇಶಿಸಿದ ವರ್ಗ ಅಥವಾ ವ್ಯಕ್ತಿಗಳ ಪ್ರವರ್ಗ ಏನೇ ಆಗಿರಲಿ ತಾರತಮ್ಯರಹಿತವಾಗಿ ಮತ್ತು ನಿರಂಕುಶ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಅ ಂ ಥ ಕಾರನೀತಿಯನ್ನು ಅನುಷ್ಠಾ ನಗೊಳಿಸಬೇಕು ಮತ್ತು ಜಾರಿಗೊಳಿಸಬೇಕು . ರಾಜ್ಯ ಸರ್ಕಾರ ಮತ್ತು ಅದರ ಏಜನ್ಸಿಗಳು / ಸಾಧನಗಳು ಜಮೀನು ಹಂಚಿಕೆ ಮಾಡುವ , ಕೋಟಾ ನೀಡುವ , ಪರವಾನಗಿ ನೀಡುವ ಮುಂತಾದಂಥ ಕೊಡುಗೆಗಳ ವಿತರಣೆಯನ್ನು ಯಾವಾಗಲೂ ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತ ರೀತಿಯಲ್ಲಿ ಮಾಡಬೇಕು ಹಾಗೂ ನಿರ್ದಿಷ್ಟ ಪ್ರಕಾರ್ಯಕರ್ತ ಅಥವಾ ರಾಜ್ಯದ ಇತರ ಅಧಿಕಾರಿಗೆ ಪ್ರದತ್ತವಾದ ಯಾವುದೇ ವಿವೇಚನಾಧಿಕಾರವಿದ್ದರೆ ,ಅದರ ಚಲಾವಣೆಯ ಮೇಲೆ ವಶೀಲಿ ಅಥವಾ ಸ್ವಜನ ಪಕ್ಷಪಾತದ ಪ್ರಭಾವ ಇರತಕ್ಕದ್ದಲ್ಲ

66. ಯಾವುದೇ ಕಾರನೀತಿಯು, ರಾಜ್ಯವು ಅಥವಾ ಅದರ ಏಜನ್ಸಿಗಳು/ಸಾಧನಗಳು ನೀಡಿದ ಆಹ್ವಾನ ಅಥವಾ ಜಾಹಿರಾತನ್ನು ಹೊರತುಪಡಿಸಿ ವ್ಯಕ್ತಿಗಳು, ನಿಕಾಯಗಳು, ಸಂಘಟನೆಗಳು ಅಥವಾ ಸಂಸ್ಥೆಗಳು ಸಲ್ಲಿಸಿದ ಅರ್ಜಿಗಳ ಆಧಾರದ ಮೇಲೆ ಜಮೀನನ್ನು ಹಂಚಿಕೆ ಮಾಡುವ ತರ್ಕಸಮ್ಮತ ಕಾರನೀತಿಗಿಂತ ಕಡಿಮೆ ಇರಲು ಸಾಧ್ಯವಿಲ್ಲವೆಂದು ನಾವು ಹೇಳಬಹುದು.ಜಮೀನಿನ ಹಂಚಿಕೆಗಾಗಿ ಅಥವಾ ಯಾವುದೇ ಇತರ ರೀತಿಯ ಕೊಡುಗೆಗಾಗಿ ವ್ಯಕ್ತಿಗಳು, ಸಂಘಟನೆಗಳು ಅಥವಾ ಸಂಸ್ಥೆಗಳು ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸುವ ಮೂಲಕ ಸ್ಪರ್ಧೆಯಲ್ಲಿರುವ ಕ್ಲೇಮನ್ನು ಸಲ್ಲಿಸುವುದರಿಂದ ಯಾರೇ ಇತರ ಅರ್ಹ ವ್ಯಕ್ತಿಗಳನ್ನು ರಾಜ್ಯವು ಹೊರಗಿಡಲಾಗುವುದಿಲ್ಲ.ಈ ಪ್ರಕ್ರಿಯೆಯನ್ನು ಖಾಸಗಿ ಉದ್ಯಮವಾಗಿ ಪರಿಗಣಿಸಿ, ರಾಜ್ಯವು ಅಥವಾ ಅದರ ಏಜನ್ಸಿಗಳು/ಸಾಧನಗಳು ಮಾಡಿದ ಜಮೀನಿನ ಯಾವುದೇ ಹಂಚಿಕೆಯನ್ನು ಅಥವಾ ಯಾವುದೇ ಇತರ ರೀತಿಯ ಕೊಡುಗೆಯನ್ನು ನಿರಂಕುಶ, ತಾರತಮ್ಯದಿಂದ ಕೂಡಿದ ಮತ್ತು ಸಂವಿಧಾನದ 14 ನೇ ಅನುಚ್ಛೇದದಲ್ಲಿ

ಅಳವಡಿಸಿದ ಸಮಾನತೆಯ ಖಂಡದ ಉದ್ದೇಶವನ್ನು ಉಲ್ಲಂಘಿಸಿ ವಶೀಲಿ ಮತ್ತು/ಅಥವಾ ಸ್ವಜನ ಪಕ್ಷಪಾತದ ಕೃತ್ಯವೆಂದು ಪರಿಗಣಿಸಲಾಗುವುದು.

67. ಆದಾಗ್ಯೂ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಅಥವಾ ಲೋಕೋಪಕಾರಿ ಚಟುವಟಿಕೆಗಳಲ್ಲಿ ತೊಡಗಿದ ಅಥವಾ ಹರಾಜು ಮೂಲಕ ಹೊರತುಪಡಿಸಿ ಅನ್ಯಥಾ ರೀತಿಯಲ್ಲಿ ಸಮಾಜಕ್ಕೆ ಸೇವೆಯನ್ನು ಸಲ್ಲಿಸುತ್ತಿರುವ ಸಂಸ್ಥೆಗಳಿಗೆ/ಸಂಘಟನೆಗಳಿಗೆ ರಾಜ್ಯವು ಎಂದಿಗೂ ಜಮೀನನ್ನು ಹಂಚಿಕೆ ಮಾಡಬಾರದು ಎಂಬುದು ಇದರರ್ಥವಲ್ಲ.ಆದಾಗ್ಯೂ, ಅಂಥ ಯಾವುದೇ ಚಟುವಟಿಕೆಯಲ್ಲಿ ತೊಡಗಿರುವ ಸಂಸ್ಥೆಗಳಿಗೆ/ಸಂಘಟನೆಗಳಿಗೆ ಹಂಚಿಕೆಗಾಗಿ ಜಮೀನನ್ನು ಒಮ್ಮೆ ಮೀಸಲಿರಿಸಿದರೆ ಅಥವಾ ಗುರುತಿಸಿದರೆ, ವಾಸ್ತವ ಹಂಚಿಕೆ ಕಾರ್ಯವನ್ನು ಸಮಾನತೆ ತತ್ವಕ್ಕನುಗುಣವಾದ ರೀತಿಯಲ್ಲಿ ಮಾಡಬೇಕೆಂಬುದನ್ನು ಗಮನಿಸುವುದು ಅವಶ್ಯಕ.ಸಕ್ಷಮ ಪ್ರಾಧಿಕಾರವು, ಸಹಜವಾಗಿಯೇ, ಹರಾಜು ಅಥವಾ ಅನ್ಯಥಾ ರೀತಿಯಲ್ಲಿ, ಹಂಚಿಕೆ ಪ್ರಕ್ರಿಯೆಯಲ್ಲಿ ಎಲ್ಲಾ ಅರ್ಹ ವ್ಯಕ್ತಿಗಳು, ಸಂಸ್ಥೆಗಳು/ಸಂಘಟನೆಗಳು ಭಾಗವಹಿಸುವುದು ಸಾಧ್ಯವಾಗುವಂತೆ ಅರ್ಹತೆಯ ಷರತ್ತುಗಳನ್ನು ಜಾಹೀರಾತಿನಲ್ಲಿ ಅಳವಡಿಸಿ ಅದನ್ನು ಹೊರಡಿಸಬೇಕು.ಪ್ರಸ್ತುತ ಸಂದರ್ಭದಲ್ಲಿ, ಸರ್ಕಾರವು ನಿಗದಿತ ದರದಲ್ಲಿ ಜಮೀನನ್ನು ಹಂಚಿಕೆ ಮಾಡಬಹುದಾದರೂ, ಆ ಸಂದರ್ಭದಲ್ಲಿ ಸಹ ಹಂಚಿಕೆಯನ್ನು ಸಂವಿಧಾನದ 14 ನೇ ಅನುಚ್ಛೇದಕ್ಕನುಗುಣವಾಗಿ ವಿವೇಚನಾಯುಕ್ತವಾಗಿ ಕಾರನಿರ್ವಹಿಸಲು ಮುಂದಾಗಬೇಕು. "

(ಒತ್ತು ನೀಡಲಾಗಿದೆ)

11. ಮೀರತ್ ಅಭಿವೃದ್ಧಿ ಪ್ರಾಧಿಕಾರ -ವಿರುದ್ಧ-ಅಸೋಸಿಯೇಷನ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್ ಮೊಕದ್ದಮೆಯಲ್ಲಿನ ನಿರ್ಣಯದ 28 ನೇ ಕಂಡಿಕೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಕೆಳಗಿನಂತೆ ತೀರ್ಪು ನೀಡಿದೆ:

ರಾಜ್ಯವು ಅಥವಾ ಅದರ ಸಾಧನಗಳ ಮೂಲಕ ಸಾರ್ವಜನಿಕ ಸ್ವತ್ತಿನ ವಿಲೆಯು ನಂಬಿಕೆಯಲಕ್ಷಣವನ್ನು ಹೊಂದಿರುತ್ತದೆ ಎಂಬುದು ಕಾನೂನಿನಲ್ಲಿಇತ್ಯರ್ಥವಾಗಿದೆ ಮತ್ತು ನಮ್ಮಿಂದ ಪುನರ್ಹೇಳಿಕೆಯ ಅಗತ್ಯವಿಲ್ಲ ಸಾರ್ವಜನಿಕ ಸ್ವತ್ತಿನ ವಿಲೆಗಾಗಿ ಅಳವಡಿಸಿಕೊಳ್ಳಬೇಕಾದ ವಿಧಾನಗಳು , ಪ್ರಕ್ರಿಯೆಯಲ್ಲಿ ಭಾಗವಹಿಸುವ ಆಸಕ್ತಿಯುಳ್ಳ ಎಲ್ಲಾ ವ್ಯಕ್ತಿಗಳಿಗೆ ಅವಕಾಶವನ್ನು ಒದಗಿಸುವಲ್ಲಿ ನಿಷ್ಪಕ್ಷಪಾತವಾಗಿರಬೇಕು ಮತ್ತು ಪಾರದರ್ಶಕವಾಗಿರಬೇಕು . "

( ಒತ್ತು ನೀಡಲಾಗಿದೆ)

ಸರ್ವೋಚ್ಚ ನ್ಯಾಯಾಲಯವು ಪಾರದರ್ಶಕ, ಗ್ರಹಿಸಬಹುದಾದ ಮತ್ತು ಪರಿಭಾಷಿತ ಚ ಕಾರನೀತಿಯನ್ನು ಹೊಂದುವ ಅಗತ್ಯತೆಗೆ ಒತ್ತು ನೀಡುತ್ತದೆ.ಇದಲ್ಲದೆ, ರಾಜ್ಯದಲ್ಲಿ ನಿಹಿತವಾದ ಸ್ವತ್ತಿನ ವಿತರಣೆಯನ್ನು ನಿಷ್ಪಕ್ಷಪಾತವಾದ ಮತ್ತು ಸಮರ್ಪಕವಾದ ರೀತಿಯಲ್ಲಿ ಮಾಡಬೇಕಾಗುತ್ತದೆ.ಪ್ರಸ್ತುತ ಸಂದರ್ಭದಲ್ಲಿ, " ಸಾಮಾಜಿಕ ಕಾರ್ಯಕರ್ತ'ನಾಗಿ ಪ್ರವರ್ಗೀಕರಿಸಬಹುದಾಗಿರುವ ಮತ್ತು ಸಾಮಾಜಿಕ ಸೇವೆಯಲ್ಲಿ ತೊಡಗಿರುವ ವ್ಯಕ್ತಿಗಳ ಪ್ರವರ್ಗದಲ್ಲಿ ಬರುವಂತೆ ಪ್ರವರ್ಗೀಕರಿಸಬಹುದಾಗಿರುವ ವ್ಯಕ್ತಿಗಳೆಂದು ವಿಧಿಸುವ ಯಾವುದೇ ಕಾರನೀತಿ ಅಥವಾ ಮಾರ್ಗಸೂಚಿಗಳಿರುವುದಿಲ್ಲ.ವಿವರಣೆ ( ಎ) ಯಿಂದ ತಿಳಿದುಬರುವಂತೆ ಅತ್ಯಂತ ಅಸ್ಪಷ್ಟ ಮಾನದಂಡವನ್ನು ನಿಗದಿಪಡಿಸಲಾಗಿದೆ. "ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು ಯಾರು ಎಂಬ

ಪ್ರಶ್ನೆಯನ್ನು ಕುರಿತ ನಿರ್ಣಯವನ್ನು ಸರ್ಕಾರದ ವಿವೇಚನೆಗೆ ಬಿಡಲಾಗಿದೆ ಎಂದು ಅದರಲ್ಲಿ ನಿರ್ದಿಷ್ಟವಾಗಿ ಉಪಬಂಧಿಸಲಾಗಿದೆ.ಯಾವ ವ್ಯಕ್ತಿಗಳು " ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳ ಪ್ರವರ್ಗದಲ್ಲಿ ಬರುತ್ತಾರೆ ಎಂಬುದನ್ನು ರಾಜ್ಯ ಸರ್ಕಾರದ ಇಚ್ಛಾನುಸಾರ ಮತ್ತು ಅದರ ಆಕಾಂಕ್ಷೆಗನುಗುಣವಾಗಿ ನಿರ್ಧರಿಸಲು ಅದಕ್ಕೆ ಅತ್ಯಂತ ವ್ಯಾಪಕ ಮತ್ತು ನಿರಂಕುಶ ವಿವೇಚನೆಯನ್ನು ಪ್ರದತ್ತಗೊಳಿಸುತ್ತದೆ.ಈ ಪ್ರವರ್ಗಕ್ಕೆ ಸಂಬಂಧಿಸಿದಷ್ಟರಮಟ್ಟಿಗೆ 4 ನೇ ಮತ್ತು 9 ಎ ವಿನಿಯಮಗಳಲ್ಲಿ ಸಂಪೂರ್ಣವಾಗಿ ತರ್ಕಸಮ್ಮತ ಮತ್ತು ಪಾರದರ್ಶಕ ಕಾರನೀತಿ ಇರುವುದಿಲ್ಲ.

12. ಈ ವಿಷಯಕ್ಕೆ ಸಂಬಂಧಿಸಿದಂತೆ, ದೆಹಲಿ ಟ್ರಾನ್ಸ್ಪೋರ್ಟ್ ಕಾರ್ಪೊರೇಷನ್ -ವಿರುದ್ಧ ಡಿ.ಟಿ.ಸಿ ಮಜದೂರ್ ಕಾಂಗ್ರೆಸ್ ಎಐಆರ್ 1991 ಎಸ್ಯುಪಿಪಿ 1 ಎಸ್ಸಿಸಿ 600ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಉಲ್ಲೇಖಿಸುವುದು ಅವಶ್ಯವಾಗಿದೆ.230 ನೇ ಕಂಡಿಕೆಯಲ್ಲಿ ನಿರ್ಣಯಿಸಿರುವುದು ಮುಖ್ಯವಾಗಿದ್ದು, ಅದನ್ನು ಕೆಳಗಿನಂತೆ ಓದಲಾಗಿದೆ:

ಜೀವನದ ಎಲ್ಲಾ ಹಂತಗಳಲ್ಲಿ ಅಧಿಕಾರದ ನಿರಂಕುಶ ಬಳಕೆಯ ವ್ಯಾಪ್ತಿಯನ್ನು ಕಡಿಮೆಗೊಳಿಸುವ ಅಗತ್ಯತೆ ಇದೆ . ವ್ಯಕ್ತಿಗಳ ಸದ್ಭಾವನೆಯನ್ನು ಅವಲಂಬಿಸುವುದು ಸಮರ್ಪಕವಲ್ಲವಾದಾಗ್ಯೂ , ಅವರು ಎಷ್ಟೇ ಉನ್ನತ -ಸ್ಥಾನದಲ್ಲಿರಿಸಬಹುದು . ವ್ಯಕ್ತಿಗಳ ಇಚ್ಛೆ ಮತ್ತು ಆಕಾಂಕ್ಷೆಗಳ ವರ್ತನೆಗಳಿಗೆ ಅನುಗುಣವಾಗಿ ಜೀವಿಸುವ ,ಸ್ವಾತಂತ್ರ್ಯದ ಮತ್ತು ಸ್ವತ್ತಿನ ಹಕ್ಕುಗಳಂಥ ಅಮೂಲ್ಯ ಹಕ್ಕುಗಳನ್ನು ವ್ಯಕ್ತಪಡಿಸುವುದು ಹೆಚ್ಚು ಸೂಕ್ತವಲ್ಲ ಮತ್ತು ಅನಪೇಕ್ಷಣೆಯವಾದುದಾಗಿದೆ . ವ್ಯಕ್ತಿಗಳು ಉನ್ನತ ಅಧಿಕಾರದ ಸ್ಥಾನಗಳನ್ನು ಹೊಂದಿದ ಕಾರಣ ಮಾತ್ರದಿಂದ ಅವರು ಜಾಣರಲ್ಲ ಮತ್ತು ಜಾಣರಾಗುವುದಿಲ್ಲ ಹಾಗೂ ಹುದ್ದೆಗಳ ಜೊತೆಗೆ ಸದ್ಭಾವನೆ, ಸೂಕ್ಷ್ಮ ವಿವೇಚನೆ ಮತ್ತು ನಿಷ್ಪಕ್ಷಪಾತತೆ ಇರುವುದಿಲ್ಲ, ಆದಾಗ್ಯೂ, ಅವರು ಉನ್ನತವಾಗಿರಬಹುದು. ಉನ್ನತ ಸ್ಥಾನಗಳನ್ನು ಹೊಂದಿರುವವರು ಜವಾಬ್ದಾರಿಯ ಉನ್ನತ ಭಾವವನ್ನು ಹೊ ಂ ದಿರುತ್ತಾರೆ ಎಂಬುದು ಗೌರವಪೂರ್ವಕ ಊ ಹೆ ಮಾತ್ರವಾಗಿರುತ್ತದೆ.ಈ ಊಹೆಯು ಕಾನೂನುಬದ್ಧವಾದುದೂ ಅಲ್ಲ ಅಥವಾ ತಾರ್ಕಿಕವೂ ಅಲ್ಲ. ಇತಿಹಾಸವು ಇದನ್ನು ಸಮರ್ಥಿಸುವುದಿಲ್ಲ ಮತ್ತು ವಾಸ್ತವದಲ್ಲಿ ಅದರ ಭರವಸೆಯನ್ನು ನೀಡುವುದಿಲ್ಲ.ನಿರ್ದಿಷ್ಟವಾಗಿ ಹೇಳಬೇಕೆಂದರೆ, ಸಮಾಜದಲ್ಲಿ ಕಾನೂನಿನ ನಿಯಮವನ್ನು ಎತ್ತಿಹಿಡಿಯುವುದು ಒ ಂ ದು ವಾಗ್ದಾನವಾಗಿದ್ದು, ಕಾನೂನಿನ ನಿಯಮದ ಮೂಲಕ ಅನುಕೂಲಕರವಾಗಿ ಮತ್ತು ಸುಲಭವಾಗಿ ವಿವೇಚನಾಧಿಕಾರವನ್ನು ಒಳಗೊಳ್ಳುವ ಸಾಧ್ಯತೆ ಇರುವಾಗ ಅದರ ಮೂಲಕ ನಿಯಂತ್ರಿಸಬೇಕಾದ ಜೀವನದ ಯಾವುದೇ ದೃಷ್ಟಿಕೋನವನ್ನು ಬಿಟ್ಟುಬಿಡುವುದು ಅವಿವೇಕ ಮತ್ತು ಅನುಚಿತವಾಗುವುದು. "(ಒತ್ತು ನೀಡಲಾಗಿದೆ) 0

13. ಆದುದರಿಂದ, ಕಾನೂನಿನ ನಿಯಮದ ಮೂಲಕ ವಿವೇಚನಾಧಿಕಾರವನ್ನು ಅನುಕೂಲಕರವಾಗಿ ಮತ್ತು ಸುಲಭವಾಗಿ ಒಳಗೊಳ್ಳಲು ಸಾಧ್ಯವಿದ್ದಾಗ, ಅದರ ಮೂಲಕ ನಿಯಂತ್ರಿತವಾಗಬೇಕಾದ ಜೀವನದ ಯಾವುದೇ ದೃಷ್ಟಿಕೋನವನ್ನು ಬಿಟ್ಟುಬಿಡುವ ಪ್ರವೃತ್ತಿಗೆ ಸರ್ವೋಚ್ಚ ನ್ಯಾಯಾಲಯವು ಅಸಮ್ಮತಿ ತೋರುವುದಿಲ್ಲ.ಚ

14, 4 ನೇ ಮತ್ತು 9 ಎ ವಿನಿಯಮಗಳೆರಡರ ಮೇರೆಗೆ, ಸರ್ಕಾರದ ಮತ್ತು ಮಂಡಳಿಯ ವಿವೇಚನಾನುಸಾರ ಕೋಟಾದಲ್ಲಿ ಮನೆಗಳ ಅಥವಾ ನಿವೇಶನಗಳ ಹಂಚಿಕೆಗಾಗಿ ಅರ್ಹನಾಗುವ ಅರ್ಜಿದಾರನು, " ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳ " ಪ್ರವರ್ಗದಲ್ಲಿ ಬರಲಿ ಅಥವಾ ಬರದಿರಲಿ, ಅದನ್ನು ರಾಜ್ಯ ಸರ್ಕಾರವು ಅದರ ವಿವೇಚನಾನುಸಾರ ನಿರ್ಧರಿಸುವುದು. "ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳು " ಪದಗಳ ಅರ್ಥವನ್ನು

ಹೇಳಲು ಪ್ರಯತ್ನಿಸುವ ವಿವರಣೆಯು ಅಸ್ಪಷ್ಟವಾಗಿದೆ.ರಾಷ್ಟ್ರದ/ರಾಜ್ಯದ ಹಿತಾಸಕ್ತಿಯಲ್ಲಿ ಕ್ಷೇಮಾಭಿವೃದ್ಧಿಯಲ್ಲಿ ಸಾಮಾಜಿಕ ಕಾರಕರ್ತರಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ವ್ಯಕ್ತಿಗಳು ಮತ್ತು ಬಡವರ ಮತ್ತು ತೊಂದರೆಯಲ್ಲಿರುವ ವ್ಯಕ್ತಿಗಳ ಉನ್ನತಿಗಾಗಿ ಸಾಮಾಜಿಕ ಸೇವೆಯ ವಿವಿಧ ಕ್ಷೇತ್ರಗಳಲ್ಲಿ ತೊಡಗಿರುವ ವ್ಯಕ್ತಿಗಳು ಎಂಬಂಥ ಅಸ್ಪಷ್ಟ ಪರಿಭಾಷೆಗಳನ್ನು ಬಳಸಲಾಗಿದೆ. "ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳ " ಪ್ರವರ್ಗದಲ್ಲಿ ಬರುವವರನ್ನು ಕುರಿತು ನಿರ್ಧರಿಸುವುದನ್ನು ಎರಡೂ ವಿನಿಯಮಗಳಲ್ಲಿನ ( ಎ) ಯಲ್ಲಿರುವ ವಿವರಣೆಗಳು ಸರ್ಕಾರದ ವಿವೇಚನೆಗೆ ಮಾತ್ರ ಬಿಟ್ಟಿವೆ.ಈ ಸಂಬಂಧದಲ್ಲಿ ಮಾರ್ಗಸೂಚಿಗಳೇ ಇಲ್ಲ. ಹಾಗಾಗಿ, ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗಳಿಗೆ " ಸರ್ಕಾರದಲ್ಲಿ ಅಥವಾ ಮಂಡಳಿಯಲ್ಲಿ ನಿಹಿತವಾಗಿರುವ ಮನೆಗಳ/ನಿವೇಶನಗಳ ಹಂಚಿಕೆಗಾಗಿ ಉಪಬಂಧ ಕಲ್ಪಿಸುವಾಗ, ಸದರಿ ವಿನಿಯಮಗಳು ಸರ್ಕಾರಕ್ಕೆ ಅದರ ಇಚ್ಛಾನುಸಾರ ಕಾರನಿರ್ವಹಿಸುವುದಕ್ಕೆ ಅವಕಾಶ ನೀಡಿವೆ.ಮಾರ್ಗಸೂಚಿಗಳು ಇಲ್ಲದೇ ಇರುವುದು, 4 ನೇ ವಿನಿಯಮದ ಭಾಗವಾಗಿ ರೂಪುಗೊಂಡಿರುವ ಕೋಷ್ಟಕದಲ್ಲಿನ ಎ ಮತ್ತು ಸಿ ಖಂಡಗಳನ್ನು ಮತ್ತು 9 ಎ ವಿನಿಯಮದಲ್ಲಿನ ಕೋಷ್ಟಕದಲ್ಲಿನ ಸಿ ಖಂಡವನ್ನು ಹಾಗೂ ವಿವರಣೆ ( ಎ) ಯನ್ನು ಸುಸ್ಪಷ್ಟವಾಗಿ ನಿರಂಕುಶವನ್ನಾಗಿಸಿದೆ ಮತ್ತು ಭಾರತ ಸಂವಿಧಾನದ 14 ನೇ ಅನುಚ್ಛೇದದ ಉಲ್ಲಂಘನೆಯಾಗಿದೆ.ಸದರಿ ಉಪಬಂಧಗಳು ವಾಸ್ತವವಾಗಿ ಸರ್ಕಾರದ ಇಚ್ಛಾನುಸಾರ ಹಾಗೂ ಅದರ ಇಷ್ಟ ಮತ್ತು ಆಕಾಂಕ್ಷೆಗನುಸಾರವಾಗಿ ಕಾರನಿರ್ವಹಿಸಲು ಅದಕ್ಕೆ ಅವಕಾಶ ನೀಡಿವೆ.ಸರ್ಕಾರದಲ್ಲಿ ಅಥವಾ ಮಂಡಳಿಯಲ್ಲಿ ನಿಹಿತವಾಗಿರುವ ಮನೆಗಳ/ನಿವೇಶನಗಳ ಹಂಚಿಕೆಯ ವಿಷಯದಲ್ಲಿ ರಾಜ್ಯ ಸರ್ಕಾರಕ್ಕೆ ನಿರುಪಾಧಿಕ ವಿವೇಚನೆಯನ್ನು ಪ್ರದಾನ ಮಾಡುವ ಇಂಥ ಮಾರ್ಗಸೂಚಿತವಲ್ಲದ ಉಪಬಂಧಗಳು ಭಾರತ ಸಂವಿಧಾನದ 14 ನೇ ಅನುಚ್ಛೇದ ಉಲ್ಲಂಘನೆಯ ನ್ಯೂನ್ಯತೆಯನ್ನು ಅನ್ವಯಿಸುವುದು.ಆದುದರಿಂದ, 4 ನೇ ವಿನಿಯಮದಲ್ಲಿನ ಎ ಮತ್ತು ಸಿ ಪ್ರವರ್ಗಗಳು ಹಾಗೂ ವಿವರಣೆಗಳು ( ಎ) ಯೊಂದಿಗೆ 9 ಎ ವಿನಿಯಮದಲ್ಲಿನ ಸಿ ಪ್ರವರ್ಗವು ಭಾರತ ಸಂವಿಧಾನದ 14 ನೇ ಅನುಚ್ಛೇದದ ಉಲ್ಲಂಘನೆಯಾಗಿ ಅನೂರ್ಜಿತಗೊಳ್ಳುವವು.

15. ಆದಾಗ್ಯೂ, ಮಂಡಳಿಯ/ರಾಜ್ಯ ಸರ್ಕಾರದ ಕೋಟಾದಲ್ಲಿನ ಮನೆಗಳ ನಿವೇಶನಗಳ ಹಂಚಿಕೆಗಾಗಿ ನಿಷ್ಪಕ್ಷಪಾತ, ಪಾರದರ್ಶಕ ಮತ್ತು ಸೂಕ್ತ ಕಾರವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ, ರಾಜ್ಯ ಸರ್ಕಾರವು ವಿನಿಯಮ ರಚಿಸುವ ಅಧಿಕಾರವನ್ನು ಸದಾ ಚಲಾಯಿಸಬಹುದಾಗಿದೆ.

16. ಆದುದರಿಂದ, ಅರ್ಜಿಯು ಪುರಸ್ಕೃತವಾಗಿದ್ದು, ಈ ಮುಂದಿನಂತೆ ನಾವು ಆದೇಶವನ್ನು ಹೊರಡಿಸಿದ್ದೇವೆ:

ಆದೇಶ

ಅರ್ಜಿಯನ್ನು ಪುರಸ್ಕರಿಸಲಾಗಿದೆ.

4 ನೇ ವಿನಿಯಮದ ಕೋಷ್ಟಕದಲ್ಲಿನ ' ಎ ' ಮತ್ತು ' ಸಿ ' ಪ್ರವರ್ಗಗಳು ಹಾಗೂ 9 ಎ ವಿನಿಯಮದ ಕೋಷ್ಟಕದಲ್ಲಿನ ' ಸಿ ' ಪ್ರವರ್ಗ ಅಷ್ಟೇ ಅಲ್ಲದೆ ಎರಡೂ ವಿನಿಯಮಗಳ ವಿವರಣೆ ( ಎ) ಇವುಗಳನ್ನು ಈ ಮೂಲಕ ಅಸಂವಿಧಾನಿಕವೆಂದು ಅನೂರ್ಜಿತಗೊಳಿಸಲಾಗಿದೆ.

ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ.